**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:18-12-2025**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

ನಾನು ಪಿ ಯು ಸಿ ವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬಾಳ್ಳುಪೇಟೆಯಲ್ಲಿ 30-40 ವರ್ಷದಿಂದ ವಾಸವಿದ್ದೇನೆ. ನಾನು ವ್ಯವಸಾಯ ಮತ್ತು ದಿನಸಿ ಅಂಗಡಿ ವ್ಯಾಪಾರ ಮಾಡುತ್ತೇನೆ. ನನ್ನ ಅಂಗಡಿ ಬಾಳ್ಳುಪೇಟೆ ಬಿ ಎಂ ರಸ್ತೆಯಲ್ಲಿ ಇರುತ್ತದೆ. ಅದರ ಹೆಸರು ಸಿದ್ದಲಿಂಗೇಶ್ವರ ಸ್ಟೋರ್ ಎಂದು ಇರುತ್ತದೆ. ನಮ್ಮ ಅಂಗಡಿ ಮತ್ತು ಮನೆ ಒಟ್ಟಾಗಿ ಇರುತ್ತದೆ. ನಮ್ಮ ಮನೆಗೆ ಹೊಂದುಕೊಂಡು ಪಶ್ಚಿಮಕ್ಕೆ ಬದ್ರರುದೀನ್ ರವರ ಅಂಗಡಿ ಮತ್ತು ಮನೆ , ಪೂರ್ವಕ್ಕೆ ಚಂದ್ರಪ್ಪ ರವರ ಮನೆ ಇರುತ್ತದೆ. ಸದರಿ ಮನೆಯಲ್ಲಿ ಪ್ರತಿವಾದಿಯವರು 3-4 ವರ್ಷಗಳಿಂದ ವಾಸವಿರುತ್ತಾರೆ. ಸದರಿ ಮನೆಯಲ್ಲಿ ಪ್ರತಿವಾದಿಯರು 60 ವರ್ಷದಿಂದ ವಾಸವಿದ್ದಾರೆ ಎಂದರೆ ಸರಿಯಲ್ಲ. ದಾವ ಆಸ್ತಿ ಇನ್ನೊಬ್ಬ ಮಗನಿಗಾಗಿ ಅವಶ್ಯಕತೆ ಇರುವುದರಿಂದ ಸ್ವಾಧೀನಕ್ಕಾಗಿ ದಾವೆ ಹೂಡಿರುತ್ತೇನೆ.

ನಾನು ದಾವ ಆಸ್ತಿಯನ್ನು ಚಂದ್ರಪ್ಪರವರಿಂದ ಖರೀದಿ ಮಾಡಿರುತ್ತೇನೆ. ಪ್ರತಿವಾದಿಯವರು ದಾವ ಆಸ್ತಿಯಲ್ಲಿ ವಾಸವಿದ್ದು, ಚಂದ್ರಪ್ಪ ರವರಿಂದ ದಾವ ಆಸ್ತಿ ಖರೀದಿ ಮಾಡುವಾಗ ಚಂದ್ರಪ್ಪ ರವರಿಗೆ ತಿಳಿಸಿರುತ್ತೇವೆ. ಲಿಖಿತವಾಗಿ ತಿಳಿಸಿರುವುದಿಲ್ಲ. ನನಗೆ ನಂಜಶೆಟ್ಟಿಯವರ ಪರಿಚಯವಿರುವುದಿಲ್ಲ. ನಂಜಶೆಟ್ಟಿಯವರ ಮಗಳು ಪ್ರತಿವಾದಿ ಎಂದರೆ ಸರಿ. ಪ್ರತಿವಾದಿಗೆ ಮದುವೆಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಗೆ ಕಳುಹಿಸಿದ ನೋಟೀಸ್ ನಲ್ಲಿ ಪ್ರತಿವಾದಿಯ ಗಂಡ ರಾಜಶೇಖರ ಎಂದು ನಮೂದು ಮಾಡಿದ್ದು, ಅದು ಬೇರೆ ಯಾರೋ ಹೇಳಿದ್ದನು ಕೇಳಿ ಬರೆಸಿರುತ್ತೇನೆ. ದಾವ ಆಸ್ತಿ ಮೊದಲು ಮಲ್ಲೇಗೌಡರಿಗೆ ಸೇರಿದ್ದು ಎಂದರೆ ಸರಿ. ಮಲ್ಲೇಗೌಡರ ಮಕ್ಕಳು ಚಂದ್ರಪ್ಪ, ಹೇಮಾಕ್ಷಿ, ಪರಮೇಶ, ಭಾಗಮ್ಮ, ವಿನಯಕುಮಾರ, ರವಿಕುಮಾರ, ಜಗದೀಶ, ತೃಪ್ತಿ ಮತ್ತು ಸಚಿನ್ ಎಂದು ಇರುತ್ತಾರೆ ಎಂದರೆ ಸರಿ.

ಮಲ್ಲೇಗೌಡರು 1961-62 ರಲ್ಲಿ ದಾವ ಆಸ್ತಿಯನ್ನು ಪ್ರತಿವಾದಿಗೆ ಬಾಡಿಗೆಗೆ ನೀಡಿದ್ದರು ಎಂದರೆ ಗೊತ್ತಿಲ್ಲ. ನಾನು ನನ್ನ ಅಂಗಡಿ ಮನೆಗೆ ಬರುವ ಮೊದಲೇ ದಾವ ಆಸ್ತಿಯಲ್ಲಿ ಪ್ರತಿವಾದಿ ಬಾಡಿಗೆಗೆ ಇದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿ 1961-62ರಲ್ಲಿ ಮಲ್ಲೇಗೌಡರಿಗೆ ಆನಂತರ ಅವರ ಮಕ್ಕಳಿಗೂ ಸಹ ಬಾಡಿಗೆ ಹಣ ನೀಡಿತ್ತಾ ಬಂದಿದ್ದರು ಎಂದರೆ ಗೊತ್ತಿಲ್ಲ. ಚಂದ್ರಪ್ಪ ರವರು ಪ್ರತಿವಾದಿಯಿಂದ ಸುಮಾರು 22 ವರ್ಷಗಳಿಂದಲೂ ಬಾಡಿಗೆ ಹಣ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಚಂದ್ರಪ್ಪ ರವರು ಪ್ರತಿವಾದಿ ಮತ್ತು

ಅವರ ತಾಯಿ ಲಕ್ಷ್ಮಮ್ಮ ರವರಿಗೆ ದಾವ ಆಸ್ತಿ ಮಾರಾಟ ಮಾಡುವುದಾಗಿ ಹೇಳಿ 80 ಸಾವಿರ ಹಣ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರವಾದಿಯವರಗೆ ದಾವ ಆಸ್ತಿಗೆ ವಿದ್ಯುತ್ ಬಿಲ್ ಮತ್ತು ನೀರಿನ ಬಿಲ್ ಕಟ್ಟುತ್ತಾ ಬಂದಿರುತ್ತಾರೆ ಎಂದರೆ ಗೊತ್ತಿಲ್ಲ.

ನಿ ಪಿ 3 ರಂತೆ ವಿದ್ಯುತ್ ಮೀಟರ್ ಪ್ರತಿವಾದಿಯವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಆನಂತರ ನನ್ನ ಹೆಸರಿಗೆ ಬದಲಾವಣೆ ಮಾಡಿರುತ್ತೇನೆ. ಅದಕ್ಕೂ ಪೂರ್ವದಿಂದಲೂ ಪ್ರತಿವಾದಿಯವರು ದಾವ ಆಸ್ತಿಯಲ್ಲಿ ಇರುತ್ತಾರೆ ಎಂದರೆ ಸರಿ. ಆದರೆ ಬಾಡಿಗೆದಾರರಾಗಿ ಇರುತ್ತಾರೆ. ಪ್ರತಿವಾದಿಯವರ ಮನೆಗೆ ಹೊಂದಿಕೊಂಡಂತೆ ಅವರಿಗೆ ಒಂದು ಅಂಗಡಿ ಮಳಿಗೆ ಸಹ ಇದೆ ಎಂದರೆ ಸರಿ. ಪ್ರತಿವಾದಿಯವರು ಒಂದು ಬಟ್ಟೆ ಅಂಗಡಿಗೆ ಬಾಡಿಗೆ ನೀಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಖರೀದಿ ಮಾಡಿದ ನಂತರ ನ್ಯಾಯಾಲಯದ ಮೂಲಕ ಅವರನ್ನು ಖಾಲಿ ಮಾಡಿಸಿರುತ್ತೇವೆಂದು ನುಡಿಯುತ್ತಾರೆ. ಸದರಿ ಅಂಗಡಿ ಇದ್ದ ಜಾಗ, ನಿ ಪಿ 1 ಖರೀದಿ ಮಾಡಿರುವ ಜಾಗ ಎಲ್ಲ ಒಂದೇ ಆಸ್ತಿಯಾಗಿರುತ್ತದೆ ಎಂದರೆ ಸರಿ.

ನಾವು ಖರೀದಿ ಮಾಡುವ ಕಾಲಕ್ಕೆ ದಾವ ಆಸ್ತಿ ಚಂದ್ರಪ್ಪ ರವರ ಹೆಸರಿನಲ್ಲಿ ಇದ್ದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ಖರೀದಿ ಬಗ್ಗೆ ಮತ್ತು ಬಾಡಿಗೆ ಹಣ ನನಗೆ ನೀಡಬೇಕೆಂದು ಪ್ರತಿವಾದಿಗೆ ನಾನು ತಿಳಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನನಗೆ ಬಾಡಿಗೆ ನೀಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಗೂ ಬಾಡಿಗೆ ಕರಾರು ಆಗಿರುವುದಿಲ್ಲ. ಮುಂಗಡ ಹಣ ಅಥವಾ ಬಾಡಿಗೆ ಹಣದ ಸಲುವಾಗಿ ನಾವು ಯಾವುದೇ ಲಿಖಿತ ದಾಖಲಾತಿ ಮಾಡಿಕೊಂಡಿರುವುದಿಲ್ಲ. ದಿಃ 18.12.2019 ರಂದು ಪ್ರತಿವಾದಿಯವರಿಗೆ ನೋಟೀಸ ನೀಡಿದಾಗ ಅವರು ತೆಗೆದುಕೊಂಡಿರುವುದಿಲ್ಲ. ನಿ ಪಿ 10 ರಲ್ಲಿ ನಾನು ಪ್ರತಿವಾದಿಯವರ ಗಂಡನ ಹೆಸರು ರಾಜಶೇಖರ ಎಂದು ನಮೂದು ಮಾಡಿದ್ದರಿಂದ ಅವರು ನೋಟೀಸ್ ನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿ. ನಿ ಪಿ 1 ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಹಿ/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**